ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ವಿವಿಪ/ಅಸಾಮಾನ್ಯ/429/2022–23 ದಿನಾಂಕ:14.02.2023.

ಗೆ,
ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

ವಿಷಯ: ದಿನಾಂಕ: 08.02.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

***

ದಿನಾಂಕ: 08.02.2023 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2 ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬೆಂ.ನ.ವಿ/ವಿವಿಪ/ಅಸಾಮಾನ್ಯ/429/2022–23 ದಿನಾಂಕ: 13.02.2023.

ದಿನಾಂಕ 08.02.2022 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ | ಸಭಾಧ್ಯಕ್ಷರು |
| 2. | ಶ್ರೀ ಕೆ.ಎ. ತಿಪ್ಪೇಸ್ವಾಮಿ | ಸದಸ್ಯರು |
| 3. | ಡಾ. ಪ್ರೇಮ | ಸದಸ್ಯರು |
| 4. | ಡಾ. ಪಂಕಜ್ ಚೌಧರಿ | ಸದಸ್ಯರು |
| 5. | ಶ್ರೀಮತಿ ಸುಮಯಾ ಫಾತಿಮಾ | ಸದಸ್ಯರು |
| 6. | ಡಾ. ಎಂ. ಆರ್. ಲಕ್ಷ್ಮಿನಾರಾಯಣ | ಸದಸ್ಯರು |
| 7. | ಡಾ. ಎಲಿಝಾಬತ್ ಜಾಸ್ಮಿನ್ | ಸದಸ್ಯರು |
| 8. | ಶ್ರೀಮತಿ. ಡಿ. ಆರ್ ಸುಧಾ | ಸದಸ್ಯರು |
| 9. | ಡಾ. ಮಹೇಶ್ ಕುಮಾರ್ ಕೆ. ಆರ್ | ಸದಸ್ಯರು |
| 10. | ಡಾ. ಎಸ್. ಎನ್. ವೆಂಕಟೇಶ್ | ಸದಸ್ಯರು |
| 11. | ಡಾ. ಸಿ. ಎಂ. ನವೀನ್ ಕುಮಾರ್ | ಸದಸ್ಯರು |
| 12. | ಡಾ: ವಿಜಯಾನಂದ ಎಸ್ | ಸದಸ್ಯರು |
| 13. | ಡಾ. ಸುಪ್ರೀತ್ ಕಿತ್ತನಕೆರೆ | ಸದಸ್ಯರು |
| 14. | ಡಾ. ಎಂ. ಪಾಂಡುರಂಗಪ್ಪ | ಸದಸ್ಯರು |
| 15. | ಡಾ. ಪಿ.ಆರ್. ಚೇತನ | ಸದಸ್ಯರು |
| 16. | ಡಾ. ಎಸ್ ಹರಿಪ್ರಸಾದ್ | ಸದಸ್ಯರು |
| 17. | ಡಾ. ಕೆ ಶಿವಶಂಕರ | ಸದಸ್ಯರು |
| 18. | ಡಾ. ವಿ.ಆರ್ ದೇವರಾಜ್ | ಸದಸ್ಯರು |
| 19. | ಡಾ. ಎಂ. ಮುನಿರಾಜು | ಸದಸ್ಯರು |
| 20. | ಡಾ. ಎನ್. ನರಸಿಂಹಮೂರ್ತಿ | ಸದಸ್ಯರು |
| 21. | ಶ್ರೀ ಎಂ. ವೆಂಕಟೇಶ್ | ಸದಸ್ಯರು |
| 22. | ಶ್ರೀ ಆತ್ಮ ಹಿರೇಮಠ | ಸದಸ್ಯರು |
| 23. | ಡಾ. ವಿ.ಲೋಕೇಶ್ ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 24. | ಶ್ರೀ ರಘು ಜಿ. ಪಿ, ವಿತ್ತಾಧಿಕಾರಿಗಳು | ಸದಸ್ಯರು |
| 25. | ಶ್ರೀ. ಸಿ. ಎನ್ ಶ್ರೀಧರ್, ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕೋರಂ ಅಭಾವದ ಕಾರಣದಿಂದಾಗಿ ಮಾನ್ಯ ಕುಲಪತಿಗಳು ಸಭೆಯನ್ನು 10 ನಿಮಿಷಗಳ ಅವಧಿಗೆ ಮುಂದೂಡುವುದಾಗಿ ತಿಳಿಸಿದರು. ಹತ್ತು ನಿಮಿಷಗಳ ನಂತರ ಸಭೆಯನ್ನು ಪುನಃ ಪ್ರಾರಂಭಿಸಲಾಯಿತು. ಕುಲಸಚಿವರು ಮಾನ್ಯ ಸಭಾಧ್ಯಕ್ಷರಿಗೆ ಮತ್ತು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಉದ್ದೇಶಿಸಿ ಪ್ರಾಸ್ತಾವಿಕವಾಗಿ ಮಾತನಾಡಲು ಕುಲಪತಿಗಳಿಗೆ ವಿನಂತಿಸಿದರು.

ಸಭಾಧ್ಯಕ್ಷರು ಎಲ್ಲ ಸದಸ್ಯರನ್ನು ಅಭಿವಂದಿಸಿ, ಕಳೆದ ವಿದ್ಯಾವಿಷಯಕ ಸಭೆಯಿಂದ ಇಲ್ಲಿಯವರೆಗೆ ವಿಶ್ವವಿದ್ಯಾನಿಲಯದಲ್ಲಿ ಜರುಗಿರುವ ವಿವಿಧ ಪ್ರಮುಖ ಚಟುವಟಿಕೆಗಳ ಕುರಿತು ವಿವರಿಸಿದರು.

- ರಾಷ್ಟ್ರೀಯ ಶಿಕ್ಷಣ ನೀತಿ 2020 ಆಶಯದಂತೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ 4 ವರ್ಷಗಳ ಸ್ನಾತಕ ಕೋರ್ಸುಗಳನ್ನು ಆರಂಭಿಸಲಾಗಿ, ಪ್ರಥಮ ಸೆಮೆಸ್ಟರ್ ವ್ಯಾಸಂಗ ಮುಕ್ತಾಯವಾಗಿದ್ದು, ಪರೀಕ್ಷಾ ದಿನಾಂಕಗಳನ್ನು ಪ್ರಕಟಿಸಲಾಗಿದೆ.

- ಹೊರದೇಶದ ವಿಶ್ವವಿದ್ಯಾಲಯಗಳೊಂದಿಗೆ ಮತ್ತು ರಾಷ್ಟ್ರೀಯ ಸಂಸ್ಥೆ/ಕೈಗಾರಿಕೆಗಳೊಂದಿಗೆ ಶೈಕ್ಷಣಿಕ, ಸಂಶೋಧನೆ, ಇಂಟರ್ನಶಿಪ್, ಅಪ್ರೆಂಟೀಸ್‌ಶಿಪ್, ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೊಗ್ರಾಮ, ಇನ್‌ಕ್ಯುಬೇಷನ್ ಸೆಂಟರ್ ಮುಂತಾದ ವಿಷಯಗಳಲ್ಲಿ ಸಹಯೋಗ ಹೊಂದಲು ಒಡಂಬಡಿಕೆಗಳನ್ನು ಮಾಡಿಕೊಳ್ಳಲಾಗಿದೆ.

- ಬ್ರಿಟಿಷ್ ಕೌನ್ಸಿಲ್ ಸಹಯೋಗದಲ್ಲಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಮುಂದಾಳತ್ವದಲ್ಲಿ ಯು.ಕೆ. ದೇಶದ ನಾಲ್ಕು ಬ್ರಿಟಿಷ್ ಮತ್ತು ಸ್ಕಾಟಿಷ್ ವಿಶ್ವವಿದ್ಯಾಲಯಗಳೊಂದಿಗೆ ಸಭೆ ಜರುಗಿಸಲಾಯಿತು. ಬರ್ಮಿಂಗ್ ಹ್ಯಾಮ್ ಸಿಟಿ ಯುನಿವರ್ಸಿಟಿ ಮತ್ತು ನಮ್ಮ ವಿಶ್ವವಿದ್ಯಾಲಯಗಳ ಜಂಟಿ ಸಹಭಾಗಿತ್ವದಲ್ಲಿ, ಬ್ಯುಸಿನೆಸ್ ಇನ್‌ಕ್ಯುಬೇಷನ್ ಸೆಂಟರ್ "Net Carbon Zero Hub" ಪ್ರಾರಂಭಿಸಲು ಆಸಕ್ತಿ ವ್ಯಕ್ತಪಡಿಸಿದ್ದು ಅದಕ್ಕೆ ಒಪ್ಪಿಗೆ ನೀಡಲಾಗಿದೆ. ಬ್ರಿಟಿಷ್ ಕೌನ್ಸಿಲ್ ಮತ್ತು ಬರ್ಮಿಂಗ್ ಹ್ಯಾಮ್ ಯುನಿವರ್ಸಿಟಿಯವರು ಒಟ್ಟು 30,000 ಪೌಂಡ್‌ಗಳ ಮೊತ್ತವನ್ನು ಹಾಗೂ ನಮ್ಮ ವಿಶ್ವವಿದ್ಯಾನಿಲಯ 10,000 ಪೌಂಡ್‌ಗಳನ್ನು ಇದಕ್ಕಾಗಿ ವೆಚ್ಚ ಮಾಡಲು ಒಪ್ಪಿಗೆ ನೀಡಲಾಗಿದೆ. ಇದೇ ತಿಂಗಳಿಂದ ಈ ಯೋಜನೆ ಪ್ರಾರಂಭವಾಗದ್ದು ಡಿಸೆಂಬರ್ ಅಂತ್ಯದೊಳಗೆ ಮೊದಲ ಹಂತದ ಪ್ರಾಜಕ್ಟ್ ಪೂರ್ಣಗೊಳ್ಳಬೇಕಿದೆ. ಈ ತಿಂಗಳ 14ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನಲ್ಲಿ ಜರುಗುವ ಸಭೆಯಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಅಧೀಕೃತವಾಗಿ ಪ್ರಾಜಕ್ಟ್ ಲಾಂಚ್ ಮಾಡುವ ಕಾರ್ಯಕ್ರಮ ಆಯೋಜಿಸಲಾಗಿದೆ.

- ಇದರಂತೆ ನಾಲ್ಕು ಪೆನ್ಸಿಲ್ವೇನಿಯಾ ಸ್ಟೇಟ್ ಯುನಿವರ್ಸಿಟಿಗಳ ಜೊತೆಗೆ 2 ದಿವಸಗಳ ಸಮಾಲೋಚನೆ ಸಭೆಗಳು ಜರುಗಿ, ಈ ನಾಲ್ಕು ವಿಶ್ವವಿದ್ಯಾಲಯಗಳು ನಮ್ಮ ವಿಶ್ವವಿದ್ಯಾನಿಲಯದೊಂದಿಗೆ ಶೈಕ್ಷಣಿಕ/ಸಂಶೋಧನಾ ಒಡಂಬಡಿಕೆ ಹೊಂದಲು ಆಸಕ್ತಿ ತೋರಿಸಿವೆ.

- ಈಗಾಗಲೇ ಸ್ಪಾನಿಷ್ ದೇಶದಿಂದ ಒಬ್ಬರು ಸ್ಪಾನಿಷ್ ಭಾಷಾ ತಜ್ಞರು ನಮ್ಮ ವಿಶ್ವವಿದ್ಯಾನಿಲಯದ ಜಾಗತಿಕ ಭಾಷೆಗಳ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಜಪಾನ್, ಜರ್ಮನಿ, ಇಟಲಿ ದೇಶಗಳಿಂದಲೂ ಸಹ ಭಾಷಾ ತಜ್ಞರನ್ನು ಪಡೆಯುವ ಪ್ರಯತ್ನ ಪ್ರಗತಿಯಲ್ಲಿದೆ.

- ಇನ್‌ಫೋಸಿಸ್ ಸಂಸ್ಥೆಯವರು ಸಿದ್ಧಪಡಿಸಿದ ಸ್ಪ್ರಿಂಗ್ ಬೋರ್ಡ್ ಪ್ಲಾಟ್‌ಫಾರ್ಮ್ ಮುಖಾಂತರ 12,000 ಕ್ಕೂ ಹೆಚ್ಚು ಕೋರ್ಸುಗಳ ಆನ್‌ಲೈನ್ ಕಲಿಕಾ ಸಾಮಗ್ರಿಗಳನ್ನು ವಿಶ್ವವಿದ್ಯಾನಿಲಯ ಹಾಗೂ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಉಪಯೋಗಿಸಲು ಅವಕಾಶ ಕಲ್ಪಿಸುವ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಕೋರ್ಸುಗಳು ನಮ್ಮ ಪಠ್ಯಕ್ರಮಕ್ಕನುಗುಣವಾಗಿ ಸೂಕ್ತ ಬಡಲಾವಣೆ ಮಾಡಿಕೊಳ್ಳುವ ಅವಕಾಶ ಹೊಂದಿರುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಆನ್‌ಲೈನ್ ತರಬೇತಿ ದೊರೆತು ಕಲಿಕೆಗೆ ಹಾಗೂ ಬೋಧನೆಗೆ ಅನುಕೂಲವಾಗಲಿದೆ.

- ನ್ಯಾಸ್‌ಕಾಮ್ ಹಾಗೂ ನ್ಯಾಷನಲ್ ಸ್ಟಾಕ್ ಎಕ್ಷಚೇಂಜ್ ಅಕಾಡೆಮಿ ಸಂಸ್ಥೆಯವರೊಂದಿಗೆ ತಿಳುವಳಿಕೆ ಪತ್ರಕ್ಕೆ ಸಹಿಹಾಕಿ, ಕೌಶಲ್ಯ ಅಭಿವೃದ್ಧಿಗೆ ಹಾಗೂ ಎಫ್‌ಡಿಪಿ ಅಂಗವಾಗಿ ವಿಶ್ವವಿದ್ಯಾನಿಲಯದ ವಿಭಾಗದ ಹಾಗೂ ಸಂಯೋಜಿತ ಕಾಲೇಜುಗಳ ಮುಖ್ಯಸ್ಥರು ಹಾಗೂ ಅಧ್ಯಾಪಕರುಗಳಿಗೆ ಎರಡು ದಿವಸಗಳ ಕಾರ್ಯಾಗಾರ ಆಯೋಜಿಸಿ ತರಬೇತಿ ನೀಡಲಾಗಿದೆ. ಸಂಬಂಧಿಸಿದ ಕೆಲವು ವಿಷಯಗಳ ಬೋಧನೆ ಹಾಗೂ ತರಬೇತಿಗೆ ಸಹಯೊಗ ಪಡೆಯಲಾಗಿದೆ.

- ವಿಜಯ ಕರ್ನಾಟಕ/ ಟೈಮ್ಸ್ ಆಫ್ ಇಂಡಿಯಾ ಪತ್ರಿಕಾ ಬಳಗದ ಸಹಯೋಗದೊಂದಿಗೆ ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ದಿನಾಂಕ 4 ಮತ್ತು 5 ಫೆಬ್ರವರಿ 2023 ರಂದು **'ಕನ್ನಡ ಹಬ್ಬ'** ಆಚರಿಸಲಾಯಿತು. ಇದರಲ್ಲಿ, ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ವ್ಯಕ್ತಿತ್ವ ವಿಕಸನದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ನಾಡಿನ ಖ್ಯಾತ ಕಲಾವಿದರು, ಗಣ್ಯರು, ಮುತ್ಸದ್ದಿಗಳು, ಚಿತ್ರನಟರು, ಸಂಗೀತಗಾರರು, ಜನನಾಯಕರು, ಈ ಜನೋತ್ಸವದಲ್ಲಿ ಭಾಗವಹಿಸಿ ವಿದ್ಯಾರ್ಥಿ ಹಾಗೂ ಯುವಜನತೆಯನ್ನು ಪ್ರೋತ್ಸಾಹಿಸಿದರು. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸಮಾರಂಭದ ಉದ್ಘಾಟನೆಯನ್ನು ಮಾಡಿದರು. ಈ ಸಮಾರಂಭದ ಯಶಸ್ಸಿಗೆ ಸಹಕರಿಸಿದ ಎಲ್ಲ ಪ್ರಾಚಾರ್ಯರಿಗೆ, ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

******

**ವಿಷಯ ಸಂಖ್ಯೆ: 01**

ವಿಷಯ : ದಿನಾಂಕ 29.10.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆ ಹಾಗೂ ದಿನಾಂಕ 16.12.2022 ರಂದು ಜರುಗಿದ ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಗಳ ಧೃಡಿಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿ.

ದಿನಾಂಕ 29.10.2022 ಹಾಗೂ ದಿನಾಂಕ 16.12.2022 ರಂದು ಜರುಗಿದ ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಗಳ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿಯನ್ನು ಸಭೆಯಲ್ಲಿ ಮಂಡಿಸಲಾಯಿತು.

****

ಕೆಲವು ಸದಸ್ಯರು 'ಭಾರತೀಯ ಸಂವಿಧಾನ' ಕಡ್ಡಾಯ ಪತ್ರಿಕೆಯ ಪಠ್ಯಕ್ರಮ ಕುರಿತು ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಸ್ಪಂದಿಸುತ್ತಾ, ಯು.ಜಿ.ಸಿ ನಿರ್ದೇಶನದ ಪ್ರಕಾರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು 'Constitution of India' ಬದಲಾಗಿ 'India and Indian Constitution' ವಿಷಯದ ಪಠ್ಯಕ್ರಮವನ್ನು

ಸಿದ್ಧಪಡಿಸಿ ಅದನ್ನು ಬೋಧಿಸಲು ಸೂಚಿಸಿದ್ದು, ಈ ಹೊತ್ತಿಗೆ ಮಹಾವಿದ್ಯಾಲಯಗಳಲ್ಲಿ ಜಾರಿಯಲ್ಲಿರುವ ಪಠ್ಯಕ್ರಮದಂತೆ ಬೋಧನೆ ಪ್ರಾರಂಭಿಸಿರುವುದರಿಂದ, ಬದಲಾದ ಪಠ್ಯಕ್ರಮವನ್ನು ಬರುವ ವರ್ಷ ಜಾರಿಗೊಳಿಸಲು ತೀರ್ಮಾನಿಸಿರುವುದಾಗಿ ತಿಳಿಸಿದರು. ಇದಲ್ಲದೆ, ಇಂತಹ ಎಇಸಿಸಿ, ಎಸ್.ಇ.ಸಿ. ಮೌಲ್ಯಾಧಾರಿತ ಕಡ್ಡಾಯ ವಿಷಯಗಳ ಬೋಧನೆ ಮತ್ತು ಮೌಲ್ಯಮಾಪನ ಅತ್ಯಂತ ಸವಾಲುದಾಯಕವಾಗಿದ್ದು, ಈ ವಿಷಯಗಳ ಪಾಠ ಮಾಡುವ ಅಧ್ಯಾಪಕರು ಪೂರ್ಣಾವಧಿ ಇರುವದಿಲ್ಲ, ಮೌಲ್ಯಮಾಪನಕ್ಕೆ ನಿಗದಿತ ವರ್ಷಗಳ ಅನುಭವ ಇರುವ ಮೌಲ್ಯಮಾಪಕರು ಬೇಕಾಗುತ್ತಾರೆ. ಇದಲ್ಲದೆ ಸುಮಾರು 35,000 ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ ಇದು ಫಲಿತಾಂಶ ಪ್ರಕಟಣೆಯ ವಿಳಂಬಕ್ಕೆ ಕಾರಣವಾಗುತ್ತದೆ. ವೃತ್ತಿಪರ ನ್ಯಾಯವಾದಿಗಳು, ನ್ಯಾಯಾಧೀಶರು, ಯೋಗ ತರಬೇತಿದಾರರು ಮುಂತಾದವರು ಪಾಠ ಹೇಳಿದರು ಅವರನ್ನು ಪರೀಕ್ಷಕರನ್ನಾಗಿ ಪರಿಗಣಿಸಲು ನಿಯಮಾವಳಿಗಳಲ್ಲಿ ಅವಕಾಶವಿಲ್ಲ. ಈ ಕಾರಣದಿಂದಾಗಿ ಇಂತಹ ಕಡ್ಡಾಯ ವಿಷಯಗಳನ್ನು ಪರ್ಯಾಯವಾಗಿ ಬೋಧನೆ ಮಾಡಲು ಕ್ರಮವಹಿಸಲಾಗಿದೆ. ಈ ಎಲ್ಲ ಸವಾಲುಗಳನ್ನು ಪರಸ್ಪರ ಚರ್ಚೆ ಹಾಗೂ ಪ್ರಾಧಿಕಾರಗಳ ನಿರ್ಣಯಗಳನ್ನು ಪಡೆದು ನಿವಾರಿಸಬೇಕಾಗಿದೆ. ವಿಶ್ವವಿದ್ಯಾನಿಲಯ ಈ ಕುರಿತು ಕಾರ್ಯ ತತ್ಪರವಾಗಿದೆ ಎಂದು ಕುಲಪತಿಗಳು ಸಭೆಗೆ ವಿವರಿಸಿದರು.

ಸ್ನಾತಕೋತ್ತರ ಬೆಸ ಸಂಖ್ಯೆ ಸೆಮೆಸ್ಟರ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಒಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸುವುದರಿಂದ ಉದ್ಭವಿಸಬಹುದಾದ ಸಮಸ್ಯೆಗಳ ಕುರಿತು ಸದಸ್ಯರಾದ ಡಾ ಎನ್. ನರಸಿಂಹಮೂರ್ತಿಯವರು ವ್ಯಕ್ತಪಡಿಸಿದರು. ಇದಲ್ಲದೆ, ವಿವಿಧ ವಿಷಯ/ವಿಭಾಗಗಳು ನೀಡುತ್ತಿರುವ ಪಿ.ಜಿ. ಡಿಪ್ಲೋಮ ಕೋರ್ಸುಗಳನ್ನು ಅವುಗಳಿಗೆ ಸಮಾನಾಂತರವಾದ ಕೋರ್ಸುಗಳನ್ನು/ಪದವಿಗಳನ್ನು ಗುರುತಿಸಿ, ಮಾನ್ಯತೆ ನೀಡುವುದು ಅಗತ್ಯ ಆ ಕುರಿತು ಕ್ರಮ ವಹಿಸಬೇಕೆಂದು ಹೇಳಿದರು.

ಸದಸ್ಯರಾದ ಡಾ. ಎಂ. ಮುನಿರಾಜು, ಡಾ. ದೇವರಾಜ್, ಡಾ. ಎಸ್. ಹರಿಪ್ರಸಾದ, ಮುಂತಾದವರು ಭಾಗವಹಿಸಿ, ಹಲವಾರು ವಿಶ್ವವಿದ್ಯಾಲಯಗಳಲ್ಲಿ, ಬೆಸ ಸಂಖ್ಯೆಯ ಸೆಮೆಸ್ಟರ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಒಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸುವ ಪದ್ದತಿಯನ್ನು ಅಳವಡಿಸಿಕೊಂಡಿದ್ದಾರೆ. ಸಮಿತಿ ಸಹ ಬೆಸ ಸಂಖ್ಯೆಯ ಸೆಮೆಸ್ಟರ ಪರೀಕ್ಷೆಗಳ ಮೌಲ್ಯಮಾಪನವನ್ನು ಒಬ್ಬರು ಮೌಲ್ಯಮಾಪಕರಿಂದ ಮಾಡಿಸಲು ಶಿಫಾರಸ್ಸು ಮಾಡಿರುವುದರಿಂದ ಅದನ್ನು ಜಾರಿಗೊಳಿಸಿರುವುದು ಸರಿಯಾಗಿದೆ ಎಂದು ಹೇಳಿದರು. ಒಬ್ಬರು ಮೌಲ್ಯಮಾಪನ ಮಾಡುವುದರಿಂದ ಉತ್ತರ ಪತ್ರಿಕೆಗಳ ಫೊಟೋ ಪ್ರತಿ ಹಾಗೂ ಮರುಮೌಲ್ಯಮಾಪನ/ಚಾಲೇಂಜ್ ಮೌಲ್ಯಮಾಪನಗಳಿಗೆ ಆಸ್ಪದ ನೀಡಬೇಕೆಂದು ಸಲಹೆ ಮಾಡಿದರು. ಸುಪ್ರೀಮ್ ಕೋರ್ಟ್ ತೀರ್ಮಾನದ ಪ್ರಕಾರ, ಉತ್ತರ ಪತ್ರಿಕೆಗಳ ಫೋಟೊ ಪ್ರತಿಗಳನ್ನು ಕೊಡುವುದು ಕಡ್ಡಾಯವೆಂದು ಶಾಸಕರಾದ ಶ್ರೀ ತಿಪ್ಪೇಸ್ವಾಮಿಯವರು ಹೇಳಿದರು.

ಸದಸ್ಯರಾದ ಡಾ. ಶಿವಶಂಕರ ರವರು, ಪ್ರಸ್ತುತ ಮರುಮೌಲ್ಯಮಾಪನ ಪದ್ಧತಿಯಲ್ಲಿ, ಮರುಮೌಲ್ಯಮಾಪನದಲ್ಲಿ ಹೆಚ್ಚಿನ ಅಂಕಗಳು ಬಂದಲ್ಲಿ, ಮೂಲ ಅಂಕ ಮತ್ತು ಮರುಮೌಲ್ಯಮಾಪನದ ಅಂಕಗಳ ಸರಾಸರಿ ಅಂಕಗಳನ್ನು ನೀಡುವುದರಿಂದ ವಿದ್ಯಾರ್ಥಿಗಳಿಗೆ ಹಿನ್ನೆಡೆಯಾಗುತ್ತಿದೆ. ಮರುಮೌಲ್ಯಮಾಪನದ ಅಂಕಗಳನ್ನು ಅಂತಿಮ ಅಂಕಗಳೆಂದು ಪರಿಗಣಿಸಲು ಕೋರಿದರು.

ಸದಸ್ಯರಾದ ಡಾ. ವಿಜಯನಂದ ರವರು ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪನ ಮಾಡಿಸುವುದನ್ನು ವಿಶ್ವವಿದ್ಯಾಲಯ ಪರಿಗಣಿಸಬೇಕು. ಇದರಿಂದ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಹೇಳಿದರು.

ಸದಸ್ಯರ ಭಾವನೆಗಳಿಗೆ ಮಾನ್ಯ ಕುಲಪತಿಗಳು ಸ್ಪಂದಿಸಿ, ಇಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸುವ ಕ್ರಮ ವೈಜ್ಞಾನಿಕವಾಗಿರುವುದು ನಿಜವಾದರೂ ವಾಸ್ತವಿಕ ಸಮಸ್ಯೆ ಹಾಗೂ ಸವಾಲುಗಳನ್ನು ಪರಿಗಣಿಸಿ,

ಈ ವಿಷಯದ ಪರಿಶೀಲನೆಗೆ ರಚಿಸಲಾದ ಸಮಿತಿ ಎಲ್ಲ ಆಯಾಮಗಳನ್ನು ಪರಿಶೀಲಿಸಿ ವರದಿ ಸಲ್ಲಿಸಿದೆ, ಬಹಳಷ್ಟು ವಿಶ್ವವಿದ್ಯಾಲಯಗಳು ಈ ರೀತಿಯ ಒಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸುವ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ ಎಂದು ಹೇಳಿ ಸಮಿತಿಯ ವರದಿಯನ್ನು ಒಪ್ಪಿ ಜಾರಿಗೊಳಿಸಿರುವ ಕ್ರಮದ ವರದಿಗೆ ಸಹಮತ ವ್ಯಕ್ತ ಪಡಿಸಬೇಕೆಂದು ಹೇಳಿದರು. ಇದಲ್ಲದೆ, ವಿದ್ಯಾರ್ಥಿಗಳು ಉತ್ತರ ಪತ್ರಿಕೆಯ ಫೋಟೋ ಪ್ರತಿಗಳನ್ನು ನೀಡುವಂತೆ ಹಾಗೂ ಮರು ಮೌಲ್ಯಮಾಪನ/ಚಾಲೇಂಜ್ ಮೌಲ್ಯಮಾಪನಕ್ಕೆ ನಿಗದಿ ಪಡಿಸಿದ ಶುಲ್ಕ ಕಡಿಮೆ ಮಾಡುವಂತೆ ಬೇಡಿಕೆ ಇಟ್ಟಿದ್ದಾರೆ. ನಿಯಮಾವಳಿಗಳ ಪ್ರಕಾರ ಇಬ್ಬರು ಮೌಲ್ಯಮಾಪನ ಮಾಡಿಸುವ ಉತ್ತರ ಪತ್ರಿಕೆಗಳಲ್ಲಿ ಮೌಲ್ಯಮಾಪಕರು ಯಾವುದೇ ಅಂಕಗಳನ್ನಾಗಲೀ ಗುರುತುಗಳನ್ನಾಗಲೀ ಮಾಡುವುದಿಲ್ಲ ಹಾಗಾಗಿ ಸ್ನಾತಕೋತ್ತರ ಉತ್ತರ ಪತ್ರಿಕೆಗಳ ಫೋಟೋ ಪ್ರತಿ ನೀಡಲು ಅವಕಾಶವಿರಲಿಲ್ಲ. ಈಗ ಒಂದೇ ಮೌಲ್ಯಮಾಪನ ವ್ಯವಸ್ಥೆ ಜಾರಿಗೊಳಿಸಿರುವುದರಿಂದ, ಪೋಟೊ ಪ್ರತಿ ನೀಡಲು ಹಾಗೂ ಮರು ಮೌಲ್ಯಮಾಪನ/ಚಾಲೇಂಜ್ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಸಬೇಕಾಗುತ್ತದೆ. ಇದನ್ನು ಸಭೆ ಗಮನಿಸಿ ಅನುಮೋದಿಸಬೇಕೆಂದು ಹೇಳಿದರು.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ದಿನಾಂಕ 29.10.2022 ಹಾಗೂ ದಿನಾಂಕ 16.12.2022 ರಂದು ಜರುಗಿದ ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಗಳ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿಗಳನ್ನು ಸಭೆ ಪರಿಗಣಿಸಿ ಒಪ್ಪಿಗೆ ನೀಡಿತು.**

**ಸ್ನಾತಕೋತ್ತರ ಬೆಸ ಸಂಖ್ಯೆಯ ಪರೀಕ್ಷೆಗಳ ಉತ್ತರ ಪತ್ರಿಕಗಳನ್ನು ಒಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸಿ ಪ್ರಶ್ನೆವಾರು ಅಂಕಗಳನ್ನು ನೀಡುವ ವಿಧಾನವನ್ನು ಅಳವಡಿಸಿಕೊಂಡು ಹಾಗೂ ಪದವಿ ಕೋರ್ಸಿಗೆ ಅನ್ವಯವಾಗುವ ಶುಲ್ಕವನ್ನು ಪಡೆದು ಅಂತಹ ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಳನ್ನು ನೀಡಲು ಹಾಗೂ ಮರು ಮೌಲ್ಯಮಾಪನಕ್ಕೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಕ್ರಮವಹಿಸಲು ಸಭೆ ಒಪ್ಪಿಗೆ ನೀಡಿತು.**

**ವಿಷಯ ಸಂಖ್ಯೆ: 02**

ವಿಷಯ : ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2023–24ನೇ ಆರ್ಥಿಕ ವರ್ಷದ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವ ಬಗ್ಗೆ.

***ಪರಾಮರ್ಶಕ ಟಿಪ್ಪಣಿ***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2023–24ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಸಿದ್ಧಪಡಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 48 ಪ್ರಕಾರ ಸದರಿ ಆಯವ್ಯಯ ಅಂದಾಜಿನ ಕರಡು ಪತ್ರವನ್ನು ದಿನಾಂಕ 07.02.2023 ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಪರಿಶೀಲನೆಗೆ ಮಂಡಿಸಲಾಗಿದ್ದು, ಹಣಕಾಸು ಸಮಿತಿ ಶಿಫಾರಸ್ಸು ಮಾಡಿರುವ ಆಯವ್ಯಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಲಾಯಿತು.

**2023–24ನೇ ಸಾಲಿನ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜು ಪತ್ರದ ಸಾರಾಂಶ**

| | |
|---|---|
| 1. ಅಂದಾಜು ಒಟ್ಟು ಸ್ವೀಕೃತಿಗಳು | ರೂ. 17529.74 ಲಕ್ಷಗಳು |
| 2. ಅಂದಾಜು ಒಟ್ಟು ಖರ್ಚು–ವೆಚ್ಚಗಳು | ರೂ. 18480.33 ಲಕ್ಷಗಳು |
| ಆಯವ್ಯಯದಲ್ಲಿ ಒಟ್ಟು ಕೊರತೆ ಮೊತ್ತ (Total Deficit in the Budget) | ರೂ. 950.59 ಲಕ್ಷಗಳು |

**ಹಣಕಾಸು ಸಮಿತಿಯ ಶಿಫಾರಸ್ಸು**

**2023-24ನೇ ಸಾಲಿನ ಆಯವ್ಯಯವನ್ನು ಹಣಕಾಸು ಸಮಿತಿ ಕೂಲಂಕುಷವಾಗಿ ಪರಿಶಿಲೀಸಿ, ಸ್ವೀಕೃತಿಗಳಲ್ಲಿ ನಮೂದಿಸಲಾದ ಅಂಕಿ ಸಂಖ್ಯೆಗಳನ್ನು ಸರಿಪಡಿಸಿಕೊಳ್ಳಲು ಸೂಚಿಸಿ, 2022-23ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2023-24ನೇ ಸಾಲಿನ ಆಯವ್ಯಯ ಅಂದಾಜು ಪತ್ರಕ್ಕೆ ಸರ್ವಾನುಮತದ ಅನುಮೋದನೆ ನೀಡಿ ವಿದ್ಯಾವಿಷಯಕ ಪರಿಷತ್ತಿಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿತು.**

ಒಟ್ಟಾರೆಯಾಗಿ ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ಆಯವ್ಯಯದ ಕುರಿತು ಹಣಕಾಸು ಸಮಿತಿ ಮೆಚ್ಚುಗೆ ವ್ಯಕ್ತಪಡಿಸಿತು.

**ವಿದ್ಯಾವಿಷಯಕ ಪರಿಷತ್ ಪ್ರಸ್ತಾವನೆ**

ಹಣಕಾಸು ಸಮಿತಿ ಅನುಮೋದಿಸಿಚ 2022-23ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2023-24ನೇ ಸಾಲಿನ ಆಯವ್ಯಯ ಅಂದಾಜು ಪತ್ರಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಲಾಯಿತು.

ಕುಲಪತಿಗಳು ಆಯವ್ಯಯದ ಪ್ರಮುಖ ಅಂಶಗಳನ್ನು ಸಭೆಗೆ ವಿವರಿಸುತ್ತಾ, ಪ್ರಸ್ತುತ ಆಯವ್ಯಯದಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಶೈಕ್ಷಣಿಕ ಕಟ್ಟಡ, ಕ್ರೀಡಾ ಸಮುಚ್ಚಯ ಹಾಗೂ ಈಗಿರುವ ಕಟ್ಟಡಗಳ ನವೀಕರಣ ಕೆಲಸಗಳು ಈ ವರ್ಷದ ಸೆಪ್ಟೆಂಬರ್/ಅಕ್ಟೋಬರ್ ತಿಂಗಳಲ್ಲಿ ಪೂರ್ಣಗೊಳ್ಳುತ್ತಿರುವುದರಿಂದ, ಶೈಕ್ಷಣಿಕ ಮೂಲಭೂತ ಸೌಲಭ್ಯಗಳನ್ನು ಒದಗಿಸುವದು, ಕ್ಯಾಂಪಸ್ ವೈಫೈಗೊಳಿಸಲು, ಗ್ರಂಥಾಲಯವನ್ನು ಯಾಂತ್ರಿಕೃತಗೊಳಿಸುವುದು, ಗ್ರಂಥಾಲಯಕ್ಕೆ ಅಗತ್ಯ ಇ-ಪುಸ್ತಕ, ಇ-ಜರ್ನಲ್ ಮತ್ತು ಕ್ಯಾಂಪಸ್ ಡಿಜಿಟಲೀಕರಣ ಮಾಡಲು ಹಾಗೂ ಡಿಜಿಟಲೀಕೃತ ಸೆಕ್ಯುರಿಟಿ ಒದಗಿಸುವುದು, ಡಾಟಾ ಸೆಂಟರ್ ಸ್ಥಾಪನೆ, ಉದ್ಯಾನ ನಿರ್ಮಾಣ ಹಾಗೂ ನಿರ್ವಹಣೆ, ಘಟಕ ಮಹಿಳಾ ಮಹಾವಿದ್ಯಾಲಯದ ಅಭಿವೃದ್ಧಿ ಮುಂತಾದ ಕೆಲಸಗಳಿಗೆ ಆಯವ್ಯಯದಲ್ಲಿ ಅವಕಾಶ ಒದಗಿಸಲಾಗಿದೆ. ಇದರ ಜೊತೆಗೆ, ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು, ಶೈಕ್ಷಣಿಕ, ಸಂಶೋಧನೆ, ಇನ್‌ಕ್ಯುಬೇಶನ್ ಸೆಂಟರ್, ಇಂಟರ್ನ್‌ಶಿಪ್ ಇತ್ಯಾದಿಗಳಿಗಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಪ್ರಮುಖವಾಗಿ ಈಗಿರುವ ವಿಭಾಗಗಳಿಗೆ ಉತ್ತಮ ಶೈಕ್ಷಣಿಕ ಸೌಲಭ್ಯ ಒದಗಿಸುವದು ಪ್ರಮುಖ ಉದ್ದೇಶವಾಗಿದೆ ಎಂದು ಹೇಳಿದರು. ಬರ್ಮಿಂಗಹ್ಯಾಮ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಅಂತಿಮಗೊಂಡಿದ್ದು, 30,000 ಬ್ರಿಟಿಶ್ ಪೌಂಡ್‌ಗಳ ಸಹಾಯದ ಒಪ್ಪಿಗೆ ದೊರಕಿದೆ ಎಂದು ಹೇಳಿದರು.

ಮುಂಬರುವ ವರ್ಷದಲ್ಲಿ, ಐದು ವರ್ಷಗಳ ಕಾನೂನು ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣ ನೀಡಲು ಸ್ಕೂಲ್ ಆಫ್ ಲಾ ಹಾಗೂ ಶಿಕ್ಷಣ, ದೈಹಿಕ ಶಿಕ್ಷಣ, ಯೋಗ ಮತ್ತು ಕ್ರೀಡಾ ವಿಜ್ಞಾನದ ಕೋರ್ಸುಗಳನ್ನು ಪಾರಂಭಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಸಲಾಗಿದೆ ಎಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ತಿಪ್ಪೇಸ್ವಾಮಿಯವರು ಆಯವ್ಯಯದಲ್ಲಿರುವ ಕೊರತೆಯನ್ನು ನಿವಾರಿಸಲು ಕೈಗೊಳ್ಳುವ

ಕ್ರಮದ ಬಗ್ಗೆ ಮಾಹಿತಿ ಕೋರಿದರು. ಮಾನ್ಯ ಕುಲಪತಿಗಳು ಆದಾಯವನ್ನು ಹೆಚ್ಚಿಸುವ ಹಾಗೂ ವೆಚ್ಚಗಳನ್ನು ನಿಯಂತ್ರಿಸುವ ಮೂಲಕ ಈ ಕೊರತೆ ನೀಗಿಸುವ ಪ್ರಯತ್ನ ಮಾಡಲಾಗುವದು ಎಂದು ಹೇಳಿದರು.

**ವಿದ್ಯಾವಿಷಯಕ ಪರಿಷತ್ತಿನ ತೀರ್ಮಾನ:**

**2022-23ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2023-24ನೇ ಸಾಲಿನ ಆಯವ್ಯಯದ ಸ್ವೀಕೃತಿಯಲ್ಲಿ ಅಂಕಿ ಸಂಖ್ಯೆಗಳನ್ನು ಸರಿಪಡಿಸಿಕೊಳ್ಳಲು ಹಣಕಾಸು ಸಮಿತಿ ಸೂಚಿಸಿರುವ ತಿದ್ದುಪಡಿಗಳೊಂದಿಗೆ ಆಯವ್ಯಯ ಅಂದಾಜು ಪತ್ರಕ್ಕೆ ವಿದ್ಯಾವಿಷಯಕ ಪರಿಷತ್ ಸರ್ವಾನುಮತದ ಅನುಮೋದನೆ ನೀಡಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 3**

ವಿಷಯ: ಬೆಂಗಳೂರಿನ ಸಂತ ಜೋಸೆಫ್ ಸ್ವಾಯತ್ತ ಸಂಜೆ ಮಹಾವಿದ್ಯಾಲಯವನ್ನು ಸ್ವಯಂ ಮುಚ್ಚುವ ಪ್ರಸ್ತಾವನೆಯ ಕುರಿತು ರಚಿಸಿದ ಪರಿಣಿತರ ಸಮಿತಿಯ ವರದಿಯನ್ನು ಪರಿಗಣಿಸುವ ಕುರಿತು.

ಉಲ್ಲೇಖ:
1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 65
2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: BCU/Aca/Auto-Closure/150/2022-23 Date: 06.08.2022
3. ಸಮಿತಿಯು ಮಹಾವಿದ್ಯಾಲಯಕ್ಕೆ ದಿನಾಂಕ: 12.10.2022 ರಂದು ಭೇಟಿನೀಡಿ ಸಲ್ಲಿಸಿದ ವರದಿ.

*****

***ಪರಮಾರ್ಶಕ ಟಿಪ್ಪಣಿ:***

ಬೆಂಗಳೂರಿನ ಸಂತ ಜೋಸೆಫ್ ಸ್ವಾಯತ್ತ ಸಂಜೆ ಮಹಾವಿದ್ಯಾಲಯವನ್ನು ಸ್ವಯಂ ಪ್ರೇರಿತವಾಗಿ ಮುಚ್ಚಲು ಸಲ್ಲಿಸಿದ ಪ್ರಸ್ತಾವನೆಯನ್ನು ದಿನಾಂಕ: 18.06.2022ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ ಸದರಿ ಸಭೆ, ಮಹಾವಿದ್ಯಾಲಯದ ಸ್ವಯಂ ಪ್ರೇರಿತವಾಗಿ ಮುಚ್ಚುವ ಪ್ರಸ್ತಾವನೆಯನ್ನು ಪರಿಗಣಿಸಿ ವರದಿ ಪಡೆಯಲು ಕುಲಪತಿಗಳಿಗೆ ಅಧಿಕಾರ ನೀಡಲಾಗಿತ್ತು ಅದರಂತೆ, ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಉಲ್ಲೇಖ (2)ರ ಅಧಿಸೂಚನೆಯಲ್ಲಿ ರಚಿಸಿದ ಡಾ. ವಿ.ಆರ್ ದೇವರಾಜ್, ಡೀನರು ವಿಜ್ಞಾನ ನಿಕಾಯ, ಇವರ ಅಧ್ಯಕ್ಷತೆಯಲ್ಲಿ ಸಮಿತಿ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ವರದಿ ಸಲ್ಲಿಸಲು ಸೂಚಿಸಲಾಗಿತ್ತು. ಸದರಿ ಸಮಿತಿ ದಿನಾಂಕ 12.10.2022 ರಂದು ಮಹಾವಿದ್ಯಾಲಯಕ್ಕೆ ಭೇಟಿನೀಡಿ ವರದಿಯನ್ನು ಸಲ್ಲಿಸಿರುತ್ತದೆ.

ವರದಿಯ ಸಾರಾಂಶ ಮತ್ತು ಶಿಫಾರಸ್ಸುಗಳು ಕೆಳಗಿನಂತಿವೆ.

Upon verification of the connected documents and interaction with the Management and Principal, the committee has made the following observations:

1. The College has not admitted students for the year 2022-23 in respect of the courses offered by the college.
2. As per the extracts provided by the Principal the following is the strength of students in different Courses:

| Course | 2018-19 Batch * | 2019-20 Batch * | 2020-21 Batch (Final year degree) (i) | 2021-22 'II Degree' (ii) |
|---|---|---|---|---|
| B.A | 16 | 48 | 55 | 112 |
| B.Com | 34 | 119 | 182 | 206 |
| BBA | 06 | 17 | 61 | 54 |
| BCA | 16 | 21 | 56 | 63 |
| M.Com | 01 | 04 | - | 21 |
| MA Journalism | - | 02 | - | - |
| MA English | - | - | - | 07 |
| **Total** | **73** | **211** | **354** | **463** |

* Students who have back-log in different semesters

i) Students who are in final year degree

ii) Students who are in second year degree

3. The Course wise details and the students admitted for each course and each semester for the years 2018-21 and 2021-22 has been provided by the college.
4. The College has made arrangements for continuing the course under BCU for the year 2022-23 and 2023-24 at the newly established St. Joseph's University.
5. An assurance has been provided by the Principal that all the records pertaining to the students since inception and the current records will be handed over to St. Joseph's University for their safe custody and to provide the required documents as and when sought by the students, Bengaluru City University and Government of Karnataka.
6. An undertaking from the Principal has been obtained and enclosed to this report.

**ಪರಿಣಿತರ ಸಮಿತಿ ಶಿಫಾರಸ್ಸು**

The Committee, after satisfying with the arrangements made by the College in respect of teaching arrangement and preservation of records, unanimously recommends accepting the request of the College/Management for Voluntary Closure of St. Joseph's Evening College (Autonomous) from the academic year 2022-23.

ಸಮಿತಿಯ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ವಿದ್ಯಾವಿಷಯಕ ಪರಿಷತ್ ನಿರ್ಣಯ:

ಬೆಂಗಳೂರಿನ ಸಂತ ಜೋಸೆಫ್ ಸ್ವಾಯತ್ತ ಸಂಜೆ ಮಹಾವಿದ್ಯಾಲಯದ ಪ್ರಾಂಶುಪಾಲರು/ಆಡಳಿತ ಮಂಡಳಿಯವರು ಸಲ್ಲಿಸಿದ ಸ್ವಯಂ ಪ್ರೇರಿತವಾಗಿ ಮಹಾವಿದ್ಯಾಲಯವನ್ನು ಮುಚ್ಚುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸಲ್ಲಿಸಿರುವ ಪರಿಣಿತರ ಸಮಿತಿಯ ಶಿಫಾರಸ್ಸುಗಳನ್ನು ಸಭೆ ಒಪ್ಪಿಕೊಂಡು, 2022–23ನೇ ಶೈಕ್ಷಣಿಕ ಸಾಲಿನಿಂದ ಸಂತ ಜೋಸೆಫ್ ಸ್ವಾಯತ್ತ ಸಂಜೆ ಮಹಾವಿದ್ಯಾಲಯವನ್ನು ಮುಚ್ಚುವ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿ ಸಿಂಡಿಕೇಟ್ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲು ವಿದ್ಯಾವಿಷಯಕ ಪರಿಷತ್ ಸಭೆ ತೀರ್ಮಾನಿಸಿತು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಸಹಿ/–
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ